ಕರ್ನಾಟಕ ವಿಧಾನಸಭೆ

ಬುಧವಾರ 25ನೇ ಜುಲೈ 2001 ಸದನವು ವಿಧಾನಸಭೆಯ ಸಭಾಂಗಣದಲ್ಲಿ, ಬೆಳಗ್ಗೆ 10 ಗಂಟೆ 40 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರಾದ ಶ್ರೀ ಎಂ.ವಿ. ವೆಂಕಟಪ್ಪ ಅವರು ಪೀಠದಲ್ಲಿ ಉಪಸ್ಥಿತರಿದ್ದರು.

1. ಪ್ರಶ್ನೋತ್ತರ

(ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಕಮಲಾಪುರ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ

271(3368) ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ) :— ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗುಲ್ಬರ್ಗಾ ಜಿಲ್ಲೆಯ ಕಮಲಾಪುರ ವಿಧಾನಸಭಾ ಕ್ಷೇತ್ರದಲ್ಲಿ ಬರುವ ಮಹಾಗಾವ್ ವಾಡಿ, ಮಹಾಗಾಂವ್ ತಾಂಡ, ಮರಗುತ್ತಿ, ಕಲೆಮೂಡ ಮುಂತಾದ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ ಸರ್ಕಾರ ಕ್ರಮ ಕೈಗೊಳ್ಳುವುದೇ;

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :—

ಅ) ಬಂದಿದೆ.

ಆ) 1. ಮಹಾಗಾಂವ್ ವಾಡಿ ಗ್ರಾಮಕ್ಕೆ ಕೊಳವೆ ನೀರು ಸರಬರಾಜು (ಪುನಶ್ಚೇತನ) ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ.

2. ಮಹಾಗಾಂವ್ ತಾಂಡಕ್ಕೆ ಕಿರು ನೀರು ಸರಬರಾಜು (ಹೆಚ್ಚಿಸುವುದು) ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ.

3. ಮರಗುತ್ತಿ ಗ್ರಾಮಕ್ಕೆ ಕೊಳವೆ ನೀರು ಸರಬರಾಜು (ಹೆಚ್ಚಿಸುವುದು) ಯೋಜನೆ ಪ್ರಗತಿಯಲ್ಲಿದೆ.

4. ಕಲಮೂಡ ಗ್ರಾಮಕ್ಕೆ ಕೊಳವೆ ನೀರು ಸರಬರಾಜು ಯೋಜನೆಯನ್ನು ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ. ಮೇಲ್ಕಂಡ ಯೋಜನೆಗಳಲ್ಲದೆ, ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು ಕಮಲಾಪುರ ವಿಧಾನ ಸಭಾ ಮತ ಕ್ಷೇತ್ರದಲ್ಲಿ 15 ಕೊಳವೆ ನೀರು ಸರಬರಾಜು ಯೋಜನೆಗಳು ಮತ್ತು 13 ಕಿರು ನೀರು ಸರಬರಾಜು ಯೋಜನೆಗಳನ್ನು ಒಟ್ಟು ರೂ.151.70 ಲಕ್ಷ ಅಂದಾಜು ವೊತ್ತದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಶ್ರೀ ದೇವುನಾಯಕ್ ಬೆಳಮಗಿ :— ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಒದಗಿಸಿರತಕ್ಕ ಉತ್ತರದಿಂದ ನನಗೆ ತೃಪ್ತಿ ಇದೆ. ಈ ಮಾತನ್ನು ಏತಕ್ಕೆ ಹೇಳುತ್ತೇನೆಂದರೆ, ನಾನು ಹೋದಸಲ ಸದನದಲ್ಲಿ ಇದೇ ಪ್ರಶ್ನೆಯನ್ನು ಹಾಕಿದ್ದೆ. ಆಗ, ಎಲ್ಲಾ ನಾಲ್ಕು ಕೆಲಸಗಳೂ ಮುಗಿದಿದೆ ಎಂದು ಉತ್ತರವನ್ನು ಕೊಟ್ಟಿದ್ದರು. ಈಗ ಕೊಟ್ಟಿರುವ ಉತ್ತರದಲ್ಲಿ, 'ಪ್ರಗತಿಯಲ್ಲಿದೆ' 'ಕೈಗೆತ್ತಿಕೊಳ್ಳಲಾಗಿದೆ' ಎಂದು ಹೇಳಿದ್ದಾರೆ. ಈ ಉತ್ತರ ಸಮರ್ಪಕವಾಗಿದೆ. ಹೋದಸಾರಿ, ನಾನು ಬಾವಿಯಲ್ಲಿದ್ದಾಗಲೂ ಸನ್ಮಾನ್ಯ ಸಚಿವರು ನನ್ನ ಮೇಲೆ ನಂಬಿಕೆ ಮಾಡಲಿಲ್ಲ. ಕೆಲಸ ಮುಗಿದಿದೆ ಎಂದು ಹೇಳಿದರು. ಅಂತಹ ಉತ್ತರವನ್ನೇ ನಿಮಗೆ ಕೊಟ್ಟರು. ಈ ರೀತಿ ತಪ್ಪು ಉತ್ತರವನ್ನು ಕೊಟ್ಟ ವ್ಯಕ್ತಿಗೆ ನೀವೇನು ಮಾಡುತ್ತೀರಿ? ನೀವು ಬೇಕಾದರೆ ಕಡತ ತೆಗೆದು ನೋಡಿ. ಈ ಕೆಲಸಗಳೆಲ್ಲಾ ಪೂರ್ಣ ಮುಗಿದಿದೆ ಎಂದು ಉತ್ತರ ಕೊಟ್ಟರು. ನಾನು ಬಾವಿಗೆ ಬಿದ್ದೆ, ಆದರೆ, ಆದರಿಂದ ನೆಮ್ಮದಿಯಾಗಲಿಲ್ಲ. ಈಗಿನ ಸಲ, ನಾಲ್ಕೂ ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ, ಪ್ರಗತಿಯಲ್ಲಿದೆ ಎಂದು ಹೇಳುತ್ತಿದ್ದಾರೆ. ಇದು ಸಮರ್ಪಕವಾದ ಉತ್ತರ. ಇವತ್ತು ಕೆಲಸ ಚಾಲೂ ಆಗಿವೆ. ಹಿಂದೆ "ಅವರು ಕ್ರಮ ತೆಗೆದುಕೊಳ್ಳುತ್ತಾರೆ ನೀವು, ನಿಮ್ಮ ಜಾಗಕ್ಕೆ ಹೋಗಿ" ಎಂದು ತಾವು ಹೇಳಿದ್ದಕ್ಕೆ, ತಮ್ಮ ಮಾತಿಗೆ ಮಾನ್ಯತೆ ಕೊಟ್ಟು ನಾನು ಬಂದೆ. ಆದರೆ, ಈಗ ಕೆಲಸಗಳು ಚಾಲೂ ಆಗಿವೆ. ಆದರೆಸ ಮೊದಲಿನ ಸಲ ನಿಮಗೆ ತಪ್ಪು ಮಾಹಿತಿ ಕೊಟ್ಟರು. ಅಂತಹ ವ್ಯಕ್ತಿಗೆ ನೀವೇನು ಮಾಡುತ್ತೀರಿ? ನನ್ನ ಕ್ಷೇತ್ರ ಬಹಳ ಹಿಂದುಳಿದ ಕ್ಷೇತ್ರ. ಬರಗಾಲ ಪೀಡಿತವಾಗಿ ಕುಡಿಯುವ ನೀರಿನ ಸಮಸ್ಯೆ ಬಹಳ ಇದೆ. ಹೆಚ್ಚಿನ ಆದ್ಯತೆ ಕೊಟ್ಟು, ನನ್ನ ಕ್ಷೇತ್ರಕ್ಕೆ ಕುಡಿಯುವ ನೀರಿನ ಒತ್ತು ಕೊಟ್ಟು, ನಿಮ್ಮ ಅಧಿಕಾರಿಗಳಿಗೆ ಆದೇಶ ಕೊಟ್ಟು ಶೀಘ್ರದಲ್ಲಿಯೇ ಕೆಲಸ ಮಾಡಿಸಬೇಕೆಂದು ಅವರಿಗೂ ವಿನಂತಿ ಮಾಡಿಕೊಳ್ಳುತ್ತೇನೆ. ಒಂದು ಮಾತು, ಇಂತಹತಪ್ಪು ಮಾಹಿತಿ ಕೊಟ್ಟವರಿಗೆ ಏನು ಮಾಡುತ್ತೀರಿ ಎನ್ನುವುದನ್ನು ಹೇಳಬೇಕು.

ಶ್ರೀ ಜಗದೀಶ್ ಶೆಟ್ಟರ್ :— ಸನ್ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಗ್ರಾಮೀಣ ಅಭಿವೃದ್ಧಿ ಸಚಿವರಲ್ಲಿ ವಿನಂತಿಮಾಡಿಕೊಳ್ಳುವುದೇನೆಂದರೆ, ಹಿಂದಿನ ಸಲ ಇದೇ ಪ್ರಶ್ನೆಯನ್ನು ಕೇಳಿದಾಗ ಇವೆಲ್ಲಾ ಕಾಮಗಾರಿಗಳೂ ಮುಗಿದುಬಿಟ್ಟಿವೆಯೆಂದು ಉತ್ತರ ಕೊಟ್ಟಿದ್ದರು.

ಇವತ್ತಿನ ಉತ್ತರದಲ್ಲಿ ಈಗ ಪ್ರಾರಂಭ ಮಾಡಿದ್ದೇವೆಂದು ಹೇಳಲಾಗಿದೆ. ಅಂದರೆ, ಈ ರೀತಿ ತಪ್ಪು ಮಾಹಿತಿಯನ್ನು ಕೊಡುವಂಥ ಅಧಿಕಾರಿಗಳಿಗೆ ಏನಾದರೊಂದು ಶಿಕ್ಷೆ ಕೊಡುವಂತಾದ್ದು ಮತ್ತು ಶಿಸ್ತಿನ ಕ್ರಮ ಕೈಗೊಳ್ಳುವಂತಾದ್ದು ಆಗಬೇಕು. ಇಲ್ಲದೇ ಹೋದರೆ ಸದನಕ್ಕೆ ಇದೇ ರೀತಿ ನಿಮ್ಮ ಮುಖಾಂತರ ತಪ್ಪು ಮಾಹಿತಿಯನ್ನು ಕೊಡುವಂತಾದ್ದು ಆಗುತ್ತದೆ. ಅದರ ಬಗ್ಗೆ ಕ್ರಮ ಕೈಗೊಳ್ಳುವಂತಾದ್ದು ಆಗಬೇಕು.

ಶ್ರೀ ಎಂ.ವೈ. ಘೋರ್ಪಡೆ :— ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ಎಷ್ಟು ವಿವರಗಳನ್ನು ಕೊಡಲಿಕ್ಕೆ ಸಾಧ್ಯ, ಆ ವಿವರಗಳನ್ನು ಕೊಡುವ ಪ್ರಯತ್ನ ನಾನು ಮಾಡುತ್ತಲೇ ಬಂದಿದ್ದೇನೆ. ಈ ಪ್ರಶ್ನೆ ಆಳಂದ ಮತ್ತು ಗುಲ್ಬರ್ಗಾ ತಾಲ್ಲೂಕು ಅಂದರೆ ಕಮಲಾಪುರ ಅಸೆಂಬ್ಲಿ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದು. ಇದರಲ್ಲಿ 158 ಹ್ಯಾಬಿಟೇಷನ್ಸ್ ಇದೆ. ಇದರಲ್ಲಿ ಆಳಂದ್‌ನಲ್ಲಿ 86, ಗುಲ್ಬರ್ಗಾ ತಾಲ್ಲೂಕಿನಲ್ಲಿ 92, ಮತ್ತೆ ನಾಲ್ಕೈದು ಕಡೆ ಎಲ್ಲಿ ತೊಂದರೆ ಇತ್ತು, ಆ ಹಳ್ಳಿಯ ವಿವರಗಳು ಕೂಡ ಇಲ್ಲಿದೆ. ಯಾವ ಯಾವ ಮಟ್ಟಕ್ಕೆ ಯಾವ ಕೆಲಸ ಬಂದಿದೆ ಎಂಬುದನ್ನೂ ಹೇಳಿದ್ದೇನೆ. ಅದಲ್ಲದೆ, 15 ಪೈಪ್ ವಾಟರ್ ಸಪ್ಲೈ ಮತ್ತು 13 ಮಿನಿ ವಾಟರ್ ಸಪ್ಲೈ ಅಂಡರ್ ಇಂಪ್ಲಿಮೆಂಟೇಷನ್ ಎಂದು ಇದೆ. ಅಂದರೆ, ಬೇರೆ ಬೇರೆ ಹಂತದಲ್ಲಿ ಇದೆ. ಯಾವ ಕೆಲಸ ಯಾವ ಹಂತದಲ್ಲಿದೆ, ಯಾವುದು ಪೂರ್ತಿಯಾಗಿದೆ, ಯಾವುದು ಅರ್ಧ ಆಗಿದೆ, ಎಲ್ಲಿ ಸೋರ್ಸ್ ಬತ್ತಿ ಹೋಗಿದೆ ಎಂದು. ಈ ಕೆಲಸದ ಬಗ್ಗೆ ಎಲ್ಲಾ ವಿವರಗಳೂ, ನನ್ನ ಕಡೆಗೆ ಇದೆ. ಇದರಲ್ಲಿ ಮುಚ್ಚುಮರೆ ಏನಿಲ್ಲ. ಇದರಲ್ಲಿ ನಾವು 151 ಲಕ್ಷ ರೂ. ಖರ್ಚು ಮಾಡುವವರಿದ್ದೇವೆ. ಇಷ್ಟೆಲ್ಲಾ ಕೆಲಸಗಳು ತಮ್ಮ ತಮ್ಮ ಕ್ಷೇತ್ರದಲ್ಲಿ ನಡೆಯುತ್ತಾ ಇದೆ ಎಂದು ನನ್ನ ಕಡೆ ಮಾಹಿತಿ ಇದೆ. ಅದನ್ನು ತಮಗೆ ಕೂಡ ಕೊಟ್ಟಿದ್ದೇನೆ. ಇದಲ್ಲದೆ, ಇನ್ನೇನಾದರೂ ಮಾಡಬೇಕೆಂದು ತಮ್ಮ ಅಭಿಪ್ರಾಯವಿದ್ದರೆ, ಅದನ್ನು ನನಗೆ ಹೇಳಿದರೆ, ಅದನ್ನೂ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ :— ಈಗ ಕೊಟ್ಟಿರುವ ಉತ್ತರ ಸರಿ ಇಲ್ಲ. ತಪ್ಪು ಇಲ್ಲ. ಆದರೆ, ಹಿಂದಿನ ಅಧಿವೇಶನದಲ್ಲಿ ಇದೇ ಪ್ರಶ್ನೆ ಕೇಳಿದಾಗ, ಇವೆಲ್ಲಾ ಕಾಮಗಾರಿಗಳೂ ಮುಗಿದು ಹೋಗಿದೆ ಎಂದು ಉತ್ತರ ಕೊಟ್ಟಿದ್ದರು. ಅದನ್ನು ಹೇಳುತ್ತಾ ಇದ್ದೇನೆ. ಆ ರೀತಿ ಮತ್ತು ಮಾಹಿತಿ ಕೊಡುವಂತಾದ್ದು ಆಗಬಾರದು ಅಂತಹವರ ಮೇಲೆ ಕ್ರಮ ಕೈಗೊಳ್ಳಿ ಎಂದು ಹೇಳುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ :— ಆಗ ಏನು ಉತ್ತರ ಕೊಟ್ಟಿದ್ದಾರೆಂಬುದು ನನ್ನ ನೆನಪಿನಲ್ಲಿ ಇಲ್ಲ ಆದರೆ, ತಪ್ಪು ಮಾಹಿತಿ ಕೊಡುವಂಥ ಪ್ರಯತ್ನವನ್ನು ಮಾಡುವುದಿಲ್ಲ. ನನಗೆ ಗೊತ್ತಾದರೆ, ಆ ರೀತಿ ತಪ್ಪು ಮಾಡಲಿಕ್ಕೆ ಬಿಡುವುದೇ ಇಲ್ಲ.